ಓದಿನಲ್ಲಿ ಚುರುಕಾಗಿದ್ದುದರಿಂದ ತನ್ನನ್ನು ಕಾಲೊನಿ ಹಾಗೂ ಮನೆಯಲ್ಲಿ ಎಲ್ಲರೂ ಅವನನ್ನು ನೋಡಿ ಕಲಿತುಕೋ ಎನ್ನುತ್ತಿದ್ದರು. ಆಗಿನಿಂದ ಹೈಸ್ಕೂಲು ಮುಗಿಯುವವರೆಗೂ ತನಗೆ ಮಹೇಂದ್ರನೇ ಸ್ಪರ್ಧಿ ಎಂದುಕೊಂಡನು. ಆ ಬೀದಿಯಲ್ಲಿ ಯಾವುದಾದರೂ ವಿಷಯದಲ್ಲಿ ಇಬ್ಬರ ನಡುವೆ ಒಂದು ರೀತಿಯ ಸ್ಪರ್ಧೆ ಇರುತ್ತಿತ್ತು. ಆದರೆ, ಕಳೆದ ಐದಾರು ವರ್ಷದಿಂದ ಮಹೇಂದ್ರ, ಊರು ಬಿಟ್ಟು ಪಟ್ಟಣದಲ್ಲಿದ್ದಾನೆ. ಆದರೂ ಅಲ್ಲಿಂದಲೇ ದಲಿತ ಗುಂಪುಗಳನ್ನು ಮುನ್ನಡೆಸುತ್ತಿದ್ದಾನೆ. ಸರಿ, ಅಂಬೇಡ್ಕರ್ ಪ್ರತಿಮೆಯಲ್ಲವಾ... ಜೊತೆಗೂಡಿ ಕೆಲಸ ಮಾಡೋಣವೆಂದುಕೊಂಡರೆ, ಹೀಗೆ ಮತ್ತೆ ಚಿಕ್ಕಂದಿನಂತೆಯೇ ನನ್ನನ್ನು ತುಳಿಯಲು ಪ್ರಯತ್ನ ಮಾಡುತ್ತಿರುವನಾ... ಹೀಗೆ ಯೋಚಿಸುತ್ತಲೇ ಮನೆ ಸೇರಿದನು.

ಕಾರ್ಯಕ್ರಮದ ಸಿದ್ಧತೆಗಳಲ್ಲಿ ಮಹೇಂದ್ರ ಚುರುಕಾಗಿರುವುದನ್ನು ನೋಡುತ್ತಿದ್ದರೆ ನರಸಿಂಹನಿಗೆ ಒಂದು ರೀತಿಯ ಅಸಂತೃಪ್ತಿಯಾಗುತ್ತಿದೆ. ಎಲ್ಲವೂ ಮಹೇಂದ್ರನೇ ಮಾಡುತ್ತಿರುವಂತಿದೆ. ನಾಳೆ ಅವನಿಗೆ ಹೆಸರು ಬಂದರೆ ಪರಿಸ್ಥಿತಿ ಹೇಗಿರುತ್ತದಪ್ಪ ಎಂದು ಯೋಚಿಸುತ್ತ ಮನೆಗೆ ಬಂದನು. ಇದು ದೊರೆಯ ಕುತಂತ್ರವೆಂದು ಗುರುತಿಸಲಾರದೆ ಹೋದನು ನರಸಿಂಹ. ಮನೆಯ ಮುಂದಿರುವ ಹಗ್ಗದ ಮಂಚಕ್ಕೆ ತಲೆನೀಡಿ ಮಲಗಿ, ಆಕಾಶದತ್ತ ನೋಡುತ್ತ, ಮಹೇಂದ್ರನ ಯೋಜನೆಯೇನಿರಬಹುದೆಂದು ಆಲೋಚಿಸುತ್ತ ಮಲಗಿದನು ನರಸಿಂಹ.

ಇನ್ನು ಮರುದಿನ ದೊರೆ ಮಹೇಂದ್ರನಿಗೆ ಗಾಳ ಹಾಕುವ ಕೆಲಸವಿಟ್ಟುಕೊಂಡನು.

ಯಾರಿಗೂ ಗೊತ್ತಾಗದಂತೆ, ಕಳ್ಳರು ಓಡಾಡುವ ನಡುರಾತ್ರಿ ಮಹೇಂದ್ರನನ್ನು ಕೂಡ ರಹಸ್ಯವಾಗಿ ಮನೆಗೆ ಕರೆಸಿಕೊಂಡನು.

'ಪ್ರತಿಮೆ ಅನಾವರಣ ಸಭೆಯ ಏರ್ಪಾಟುಗಳು ಹೇಗೆ ನಡೆಯುತ್ತಿವೆಯೋ?' ಎಂದು ಕೇಳಿದನು.

ಕಣ್ಣು ಉಜ್ಜಿಕೊಳ್ಳುತ್ತ ದೊರೆಯ ಮುಂದೆ ನಿಂತಿರುವ ಮಹೇಂದ್ರನಿಗೆ ಚಳಿಗಾಲದ ದಿನವೂ ಸೆಕೆ ಹಿಡಿಯುತ್ತಿದೆ.

ದೊರೆಯ ಘೋರಗಳು, ಅಪರಾಧಗಳು ತನಗೆ ಚೆನ್ನಾಗಿ ಗೊತ್ತು. ಏನೋ ನಡೆಯಲಿದೆ ಎಂದು ಗ್ರಹಿಸಿ, ಎದೆಬಡಿತವನ್ನು ನಿಯಂತ್ರಣ ಮಾಡಿಕೊಂಡು ಬಾಯ್ಬಿಟ್ಟನು.

'ಚೆನ್ನಾಗಿ ನಡೆಯುತ್ತಿದೆ ದೊರೆ?' ಎಂದನು ಮಹೇಂದ್ರ.

'ಅದು ಸರಿ ನಿನಗೊಂದು ವಿಷಯ ಹೇಳೋಣವೆಂದು ಕರೆದೆ' ಎಂದನು ದೊರೆ.

ಮಹೇಂದ್ರನಿಗೆ ಆಶ್ಚರ್ಯವಾಗಿ ದೊರೆ ಏನು ಹೇಳುವನೋ ಎಂದು ಸಂಶಯದಿಂದ ನೋಡುತ್ತಿದ್ದಾನೆ. 'ಹೇಳಿ ದೊರೆ' ಎಂದನು.

'ಏನಿಲ್ಲ ಕಣೋ... ನಾನು ಮೊನ್ನೆ ಊರಿನ ಆಟೋಸ್ಟ್ಯಾಂಡ್ ಬಳಿ ಕುಳಿತು ಟೀ ಕುಡಿಯುತ್ತಿದ್ದೆ. ಅಲ್ಲಿ ಕಾಣಿಸಿದ ನರಸಿಂಹನನ್ನು ಸಭೆಯ ಕುರಿತು ಕೇಳಿದೆ. ರಾಜಕೀಯ ಪಕ್ಷದ ನಾಯಕರು ಯಾರನ್ನಾದರೂ ಕರೆಯುತ್ತಿದ್ದೀರಾ ಎಂದು ಕೇಳಿದೆ. ಅವನು ತನಗೆ ಅಧಿಕಾರ ಪಕ್ಷದವರನ್ನು ಕರೆಯಬೇಕೆಂದಿದೆ ಎಂದು ಹೇಳಿದನು. ನಾನು ಏಕೆ ಪಕ್ಷದವರೆಲ್ಲ ಎಂದೆ. ಆದರೂ ಅವನು ಕೇಳುತ್ತಿಲ್ಲ. ನಿನಗೆ ತಿಳಿಯದೆ ಏನೇನೋ ಮಾಡುತ್ತಿದ್ದಾನೆ. ಪಾಪ ನೀನೇನೋ ಜಾತಿಗೋಸ್ಕರ ಕಷ್ಟಪಟ್ಟು ಕೆಲಸ ಮಾಡುವ ವ್ಯಕ್ತಿ. ಮತ್ತೆ ಅವನೇನೋ ಸಭೆಯನ್ನು ಅಡ್ಡ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾನೆ. ಅವನನ್ನು ಕೇಳಬೇಡ. ನಿನ್ನ ಮನಸ್ಸಿನಲ್ಲಿಯೇ ಇಟ್ಟುಕೋ' ಎಂದು ಹೇಳಿ ಕಳುಹಿಸಿದನು.

ಆ ಮಾತುಗಳು ಮಹೇಂದ್ರನಿಗೆ ಅಚ್ಚರಿ ಮೂಡಿಸಿತು. ತನಗೆ ತಿಳಿಯದೆ ನರಸಿಂಹ ಅಂತಹ ಕೆಲಸ ಮಾಡುವುದಿಲ್ಲವೆಂದು ಗೊತ್ತು. ದೊರೆ ಉದ್ದೇಶಪೂರ್ವಕವಾಗಿ ಏನಾದರೂ ಕಥೆ ಕಟ್ಟುತ್ತಿದ್ದಾನೇನೋ ಎಂದು ಯೋಚಿಸುತ್ತಿದ್ದಾನೆ. ಸರಿ, ಏನಾಗುತ್ತದೋ ನೋಡೋಣ ಎಂದುಕೊಂಡ.

***

ಹೊತ್ತು ಮುಳುಗಿತು. ಊರಿಗೆಲ್ಲಾ ಕತ್ತಲು ಮುಸುರಿಕೊಂಡಿದೆ. ಬೀದಿಯ ದೀಪಗಳಿಂದ ಅಲ್ಲಲ್ಲಿ ಮಸುಕಾದ ಬೆಳಕಿದೆ. ಕಾಲೊನಿಯಲ್ಲಿ ಯಾವ ಬೆಳಕಿಲ್ಲದೆ ಒದ್ದಾಡುತ್ತಿದೆ. ನಿನ್ನೆಯವರೆಗೂ ಕಾಲೊನಿಗಾಗಿ ಎಲ್ಲರೂ ಒಗ್ಗಟ್ಟಾಗಿರಬೇಕೆಂದುಕೊಂಡ ಐಕ್ಯತೆಯನ್ನು ದೊರೆ ಒಂದೇ ಏಟಿನಿಂದ ಒಡೆಯುವ ಸಂಚು ಹೂಡಿದ್ದಾನೆ. ಆ ಸಂಚಿಗೆ ಮಹೇಂದ್ರ ನರಸಿಂಹ ಇಬ್ಬರೂ ಬಲಿಪಶುಗಳಾಗುವ ಸಮಯ ಬಂದಿದೆ. ದೊರೆಯ ಕುತಂತ್ರದಿಂದ ಒಂದು ಗುಂಪು ಎರಡು ಗ್ಯಾಂಗುಗಳಾಗಿ ರೂಪುತಳೆಯುತ್ತಿದೆ. ಅದೆಲ್ಲವನ್ನು ನೋಡಿ ದೊರೆ ಅನುಯಾಯಿಗಳೊಂದಿಗೆ ಸಂಭ್ರಮಿಸುತ್ತಿದ್ದಾನೆ.

***

ಕಾರ್ಯಕ್ರಮಕ್ಕೆ ಊಟದ ಖರ್ಚುಗಳನ್ನು ತಾನೇ ನೀಡುವುದಾಗಿ ಮಾತು ನೀಡಿದ ದೊರೆ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪಟ್ಟಣಕ್ಕೆ ಹೋದನು. ಯುವ ಕಾರ್ಯಕರ್ತ ಸಂಪತ್ ಹೊತ್ತಿಗೆ ಮೂರು ಬಾರಿ ದೊರೆಯ ಮನೆ ಸುತ್ತಲೂ ತಿರುಗಾಡಿದನು. ಪ್ರತಿಮೆಗೆ ಮಹೇಂದ್ರ, ಸಂಪತ್, ನರಸಿಂಹರೊಂದಿಗೆ ಕೆಲವರು ತಲೆಗೆ ಒಂದಿಷ್ಟು ಹಾಕಿಕೊಂಡರು. ಆದರೆ, ಭೋಜನಕ್ಕೆ ಹಣವಿಲ್ಲವೆಂದರೆ ಹೇಗೆ ಎಂದು ಒದ್ದಾಡುತ್ತಿದ್ದಾರೆ.

ಕಾರ್ಯಕ್ರಮದ ಹಿಂದಿನ ದಿನ ರಾತ್ರಿ ಸಿದ್ಧತೆಗಳು ಆತುರವಾಗಿ ನಡೆಯುತ್ತಿವೆ. ತೋರು ಬೆರಳನ್ನು ಮುಗಿಲಿಗೆ ಚಾಚಿದ ಮಹನೀಯ ಅಂಬೇಡ್ಕರ್ ಪ್ರತಿಮೆ... ಸಿಮೆಂಟ್ ಸ್ತಂಭದ ಮೇಲೆ ಮುಸುಕಿನೊಳಗೆ ನಿಂತಿದೆ. ಶಿಲಾಫಲಕ ಉದ್ಘಾಟನೆಗೆ ಸಿದ್ಧಗೊಂಡಿದೆ.

ಟೆಂಟ್ ಕೆಳಗೆ ಕುರ್ಚಿಗಳನ್ನು ಸಾಲು ಸಾಲುಗಳಾಗಿ ಜೋಡಿಸಲಾಗಿದೆ. ತಲೆ ತಲಾಂತರಗಳಿಂದ ಸಿಕ್ಕ ಕತ್ತಲಿನ ಸ್ಥಾನವನ್ನು ಇಂದು ತಾತ್ಕಾಲಿಕವಾಗಿಯಾದರೂ ಬೆಳಕು ತುಂಬಿದೆ. ಕಾಲೊನಿ ತಲೆಸ್ನಾನ ಮಾಡಿತು. ಬೀದಿಯೆಲ್ಲ ಸುಂದರವಾಗಿ ಅಲಂಕೃತಗೊಂಡಿದೆ. ಮೈಕುಗಳು, ಸೌಂಡ್ ಬಾಕ್ಸ್‌ಗಳಲ್ಲಿ ಉತ್ಸಾಹ ತುಂಬಬಲ್ಲ ಹಾಡುಗಳು ಮೊಳಗುತ್ತಿವೆ. ಊರ ನೋಟವೆಲ್ಲ ಪ್ರತಿಮೆಯ ಮೇಲೆಯೇ ಇದೆ. ಸರಿಯಾಗಿ ವೇದಿಕೆಯ ಮೇಲೆ ಅತಿಥಿಗಳನ್ನು ಕರೆಯುವ ಸಮಯಕ್ಕೆ ದೊರೆಯೂ ಬಂದನು. ಎಲ್ಲರನ್ನೂ ಒಮ್ಮೆ ಗಮನವಿಟ್ಟು ನೋಡಿ, ಅಲ್ಲಿಗೆ ಬಂದ ಗ್ರಾಮಸ್ಥರೆಲ್ಲರಿಗೆ ಎರಡು ಕೈಗಳೆತ್ತಿ ನಮಸ್ಕರಿಸಿ ಕುಳಿತುಕೊಂಡನು. ಮಹೇಂದ್ರ ಮಾತ್ರ ಅತಿಥಿಗಳೊಂದಿಗೆ ದೊರೆಯನ್ನು ಕೂಡ ಗೌರವಪೂರ್ವಕವಾಗಿ ವೇದಿಕೆಗೆ ಆಹ್ವಾನಿಸಿದನು.

ವೇದಿಕೆ ಏರಿದ ದೊರೆ ನರಸಿಂಹನತ್ತ ನೋಡಿದನು. ಮೈಕ್ ಮುಂದೆ ನಿಂತಿದ್ದ ಮಹೇಂದ್ರನನ್ನು ನೋಡಿದೆಯಾ ಎನ್ನುವಂತೆ ಸನ್ನೆ ಮಾಡಿದನು. ನಾನು ಹೇಳಿದಂತೆಯೇ ಅವನು ಅಧ್ಯಕ್ಷನಾಗಿ ಮಿಂಚುತ್ತಿದ್ದಾನೆ. ನಾನು ಹೇಳಿದ್ದೇ ನಿಜವಾಯಿತಾ ಇಲ್ಲವಾ ಎನ್ನುವಂತೆ ಕಣ್ಣಿನಲ್ಲಿಯೇ ತಲೆಯಾಡಿಸುತ್ತ ನರಸಿಂಹನಿಗೆ ಸನ್ನೆ ಮಾಡಿದನು.

ದೊರೆಯ ಸನ್ನೆಯಲ್ಲಿ 'ಈಗ ಅರ್ಥವಾಯಿತಾ, ನೀನು ನಿನ್ನ ಜೊತೆಯವನಿಂದಲೇ ಮೋಸಹೋಗುತ್ತಿದ್ದೀಯ' ಎಂಬ ಅರ್ಥವಿದೆ. ನರಸಿಂಹನು ಕೂಡ ಹೌದೆನ್ನುವಂತೆ ತಲೆಯಾಡಿಸಿದನು.

ಮಹೇಂದ್ರ ಅಧ್ಯಕ್ಷೀಯ ಭಾಷಣದಲ್ಲಿ ಅಂಬೇಡ್ಕರ್ ಹಿರಿಮೆಯನ್ನು, ಈ ದೇಶಕ್ಕೆ ಅವರು ಮಾಡಿದ ಸೇವೆಯನ್ನು ಹೊಗಳಿ ಅತಿಥಿಗಳನ್ನು ಮಾತನಾಡುವಂತೆ ಮೈಕ್ ನೀಡಿ, ದೊರೆಯ ಪಕ್ಕ ಇದ್ದ ಕುರ್ಚಿಯಲ್ಲಿ ಕುಳಿತುಕೊಂಡನು.

ಕೂಡಲೇ ದೊರೆ 'ಏನೋ ಮಹೇಂದ್ರ ರಾಜಕೀಯ ನಾಯಕರನ್ನು ಬೇಡವೆಂದುಕೊಂಡಿರಲ್ಲವಾ, ಮತ್ತೆ ಹಸಿರು ಬಾವುಟದ ನಾಯಕ ನರಸಾರೆಡ್ಡಿ ಪಟೇಲನನ್ನು ಯಾಕೆ ಕರೆದಿರಿ?' ಎಂದು ಯಾರಿಗೂ ಕೇಳಿಸದಂತೆ ಪಿಸುಮಾತಿನಲ್ಲಿ ಕೇಳಿದನು. 'ಈ ಕೆಲಸ ನರಸಿಂಹನದ್ದೇನಾ?' ಎಂದು ಸ್ವಲ್ಪ ಕೋಪದಿಂದಲೇ ಕೇಳಿದನು.

ಮಹೇಂದ್ರ ದೊರೆಯ ಪ್ರಶ್ನೆಗೆ ಸಿದ್ಧವಾಗಿರುವವನಂತೆ, 'ನೀವು ಕೂಡ ಒಂದು ಪಾರ್ಟಿಯ ನಾಯಕರೇ ಅಲ್ಲವಾ' ಎಂದನು. 'ಮೇಲಾಗಿ ನರಸಾರೆಡ್ಡಿ ಈ ಊರಿನವರೇ ಅಲ್ಲವಾ ದೊರೆ, ಕರೆಯದೆ ಹೇಗೆ ಇರುತ್ತೀವಿ ದೊರೆ?!' ಎಂದನು.

ದೊರೆಗೆ ಎಲ್ಲಿ ಉರಿಯಬೇಕೋ ಅಲ್ಲಿ ಉರಿಯಿತು. ಆದರೂ ಅದನ್ನು ತೋರ್ಪಡಿಸಿಕೊಳ್ಳದೆ 'ಅದಲ್ಲ ಮಹೇಂದ್ರ, ನಾಳೆ ಏನಾದರೂ ವ್ಯತ್ಯಾಸವಾದರೆ, ಎಲ್ಲ ನಿನ್ನ ಮೇಲೆ ಬರುತ್ತದೆ. ಅದಕ್ಕೆ ಅದೆಲ್ಲ ನರಸಿಂಹನ ಕುತಂತ್ರವನ್ನು ಮೈಕಿನಲ್ಲಿ ಹೇಳು. ನಾನಿದ್ದೀನಲ್ಲವಾ ನೋಡಿಕೊಳ್ಳುತ್ತೇನೆ' ಎಂದನು. ಜನರೆದುರು ಅವಮಾನಿಸಿ ಕಾಲೊನಿಯನ್ನು ಎರಡು ವರ್ಗಗಳಾಗಿ ಬದಲಾಯಿಸಬೇಕೆಂಬುದು ದೊರೆಯ ಸಂಚು.

ಮುಖ್ಯ ಭಾಷಣಕಾರರ ಮಾತು ಮುಗಿದ ಕೂಡಲೇ ಮಹೇಂದ್ರ ಮೈಕ್ ಮುಂದೆ ಬಂದು, 'ಈಗ ನಮ್ಮ ನರಸಿಂಹನ ಕುರಿತು ಹೇಳಬೇಕು' ಎಂದನು. ದೊರೆ ಮೀಸೆ ತಿರುಗಿಸಿಕೊಳ್ಳುತ್ತಿದ್ದಾನೆ. ನರಸಿಂಹನೂ ಸೇರಿದಂತೆ ಅಲ್ಲಿ ಸೇರಿದವರೆಲ್ಲರ ಕಿವಿಗಳೆಲ್ಲ ಚುರುಕಾಗಿ ಏನು ಹೇಳುವನೋ ಎಂದು ಕಾತುರದಿಂದ ಕೇಳಿಸಿಕೊಳ್ಳುತ್ತಿದ್ದಾರೆ.